**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು.</u>**

**<u>ದಿನಾಂಕ:</u> 15.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು:</u>** ಅರ್ಜಿದಾರರ ಪರ ವಕೀಲರು **ಶ್ರೀ. HRN** ರವರಿಂದ.

2ನೇ ಅರ್ಜಿದಾರರ ತಂದೆ ರಂಗಯ್ಯ ರವರು ನನ್ನ ತಾಯಿಯಾದ ಈರಾಜಮ್ಮ ವಿರುದ್ದ ಅದಾ ನಂ. 81/2003 ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆ ವಿಚಾರಣೆಯಾಗಿ ನಂತರ ವಜಾ ಆಗಿರುತ್ತದೆ ಎಂದರೆ ಸರಿ. ನಂತರ ಸದರಿ ದಾವೆಯ ವಾದಿಗಳು ಆರ್ ಎ 73/2006 ರಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ನಂತರ ಸದರಿ ಮೇಲ್ಮನವಿಯಲ್ಲಿ ದಾವೆ ನಂ. 81/2003 ನ್ನು ಮತ್ತೊಮ್ಮೆ ವಿಚಾರಣೆ ಮಾಡಬೇಕೆಂದು ಹಿಂದಿರುಗಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಆದೇಶ ಮಾಡುವ ಸಮಯದಲ್ಲಿ ಸದರಿ ನ್ಯಾಯಾಲಯವು ದಿ: 27.07.2011 ರಂದು ನಾವೆಲ್ಲರೂ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಎಂದು ನಿರ್ದೇಶನ ನೀಡಿತ್ತು ಎಂದರೆ ಸಾಕ್ಷಿಯು ಆ ದಿನಾಂಕದಂದು ನನ್ನ ತಂದೆ ನನ್ನ ತಾಯಿಯಿಂದ ಜಿ ಪಿ ಎ ಪಡೆದು ನ್ಯಾಯಾಲಯಕ್ಕೆ ಹಾಜರಾಗಿದ್ದರು ಎಂದು ನುಡಿಯುತ್ತಾರೆ. ದಿ: 27.07.2011 ರಲ್ಲಿ 2ನೇ ಅರ್ಜಿದಾರರ ತಂದೆಯಾದ ರಂಗಯ್ಯ ರವರು ತೀರಿಕೊಂಡಿದ್ದರು ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ. 2ನೇ ಅರ್ಜಿದಾರರ ತಂದೆಯಾದ ರಂಗಯ್ಯ ರವರು ಆ ಸಮಯದಲ್ಲಿ ತೀರಿಕೊಂಡಿದ್ದರಿಂದ ಅರ್ಜಿದಾರರು ದುಃಖದಲ್ಲಿದ್ದು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲಾ ಎಂದು ನುಡಿಯುತ್ತಾರೆ. 2ನೇ ಅರ್ಜಿದಾರರ ತಂದೆಯಾದ ರಂಗಯ್ಯ ರವರು ಪರವಾಗಿ ಇದ್ದಂತಹ ವಕೀಲರು ಸಹಾ ಆ ಸಮಯದಲ್ಲಿ ತೀರಿಕೊಂಡಿದ್ದರು ಎಂದರೆ ನನಗೆ ಮಾಹಿತಿ ಇಲ್ಲಾ. ಆ ದಾವೆಯ ವಾದಿಯಾದ ರಂಗಯ್ಯ ಮತ್ತು ಅವರ ಪರ ವಕೀಲರು ತೀರಿಕೊಂಡಿದ್ದರಿಂದ ಅರ್ಜಿದಾರರಿಗೆ ಸರಿಯಾದ ಮಾಹಿತಿ ಸಿಗದೆ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲಾ. ರಂಗಯ್ಯರವರ ಪತ್ನಿ ನಿಂಗಾಜಮ್ಮ ರವರ ಆರೋಗ್ಯ ಸರಿಯಿರಲಿಲ್ಲ ಎಂದರೆ ನನಗೆ ಮಾಹಿತಿ ಇಲ್ಲಾ. ಸದರಿ ಅರ್ಜಿಯನ್ನು ಹಾಕುವ 02 ತಿಂಗಳ ಮುಂಚೆ ಅರ್ಜಿದಾರರಿಗೆ ದಾವೆಯ ಎಲ್ಲಾ ವಿಷಯಗಳು ತಿಳಿದಿರುತ್ತದೆ ಎಂದರೆ ನನಗೆ ಆ ಬಗ್ಗೆ

ಮಾಹಿತಿ ಇಲ್ಲಾ. ನಂತರ ಅರ್ಜಿದಾರರು ದಾಖಲಾತಿಗಳನ್ನು ಪಡೆದು ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ನನಗೆ ಅರ್ಜಿದಾರರು ಯಾರೆಂಬುದು ನನಗೆ ತಿಳಿದಿರುವುದಿಲ್ಲ. ಈ ಅರ್ಜಿಯನ್ನು ಹಾಕಿದ ನಂತರ ನನ್ನ ತಾಯಿಗೆ ಈ ಪ್ರಕರಣದ ನೋಟೀಸ್ ಬಂದಿರುತ್ತದೆ ಎಂದರೆ ಸರಿ. ನಂತರ ನನ್ನ ತಾಯಿ ಪರವಾಗಿ ನಾನು ಜಿ ಪಿ ಎ ಪಡೆದು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ಅರ್ಜಿದಾರರು ನ್ಯಾಯಾಲಯಕ್ಕೆ ತಡವಾಗಿ ಹಾಜರಾಗಲು ಯಾವುದೇ ದುರುದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ಅ ದಾ ನಂ. 81/2003 ದಾವೆಯನ್ನು ಮತ್ತೊಮ್ಮೆ ವಿಚಾರಣೆ ಮಾಡಿದರೆ ನನಗೆ ತೊಂದರೆ ಆಗುತ್ತದೆ ಎಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಅರಕಲಗೂಡು.**